

ಅನಂತ್‌ನಾಗ್, ಆರ್.ಡಿ. ಬರ್ಮನ್ (ಎಡದಿಂದ ಮೂರನೆಯವರು) ಜೊತೆ ವಿಜಯ್ (ಕೊನೆಯವರು)



ಬಿ.ವಿಜಯ್ ಡಾ. ರಾಜ್‌ಕುಮಾರ್ ಅವರೊಂದಿಗೆ

## ರಾಜ್ 'ವಿಜಯ'ಯಾನ

ಮೊದಲ ಚಿತ್ರ ಸಸ್ಪೆನ್ಸ್ ಥ್ರಿಲ್ಲರ್; ನಂತರದ್ದು ಹಾಸ್ಯ ಪ್ರಧಾನ ಚಿತ್ರ. ಆನಂತರದ್ದು ಕೌಬಾಯ್ ಚಿತ್ರ. ಚಿತ್ರದಿಂದ ಚಿತ್ರಕ್ಕೆ ಎಂಥಾ ವೈವಿಧ್ಯತೆ; ನಿರ್ದೇಶಕರಾಗಿ ಎಂಥಾ ಬೆಳವಣಿಗೆ!. ಇದನ್ನೆಲ್ಲ ಗಮನಿಸುತ್ತಲೇ ಇದ್ದ ರಾಜ್‌ಕುಮಾರ್ ಅವರ ಸೋದರ ವರದಪ್ಪ, ವಿಜಯ್ ಅವರನ್ನು ರಾಜ್ ಬಳಿಗೆ ಕರೆದೊಯ್ದರಂತೆ. ಅದು ರಾಜ್‌ಕುಮಾರ್ ತಮ್ಮ ಚಿತ್ರಜೀವನದ ಉತ್ತುಂಗದಲ್ಲಿದ್ದ ಕಾಲ; ರಾಜ್ ಅವರ ಚಿತ್ರ ನಿರ್ದೇಶನ ಮಾಡುವ ಅವಕಾಶ ಸಿಗುವುದು ಸುಲಭದ ಮಾತಾಗಿರಲಿಲ್ಲ. ರಾಜ್ ಅವರಿಗೂ ಮೊದಲ ನೋಟದಲ್ಲಿ ವಿಜಯ್ ಅವರ ಬಗ್ಗೆ ಅಂಥಾ ವಿಶ್ವಾಸ ಮೂಡಲಿಲ್ಲ. ಕೊನೆಗೆ ವಿಜಯ್ ಅವರಿಗೆ ಮೂರ್ನಾಲ್ಕು ದೃಶ್ಯಗಳನ್ನು ಹೇಳಿ, ಅವನ್ನು ಚಿತ್ರೀಕರಿಸಿಕೊಂಡು ಬರಲು ತಿಳಿಸಲಾಯಿತು; ದೃಶ್ಯಗಳನ್ನು ತಮ್ಮದೇ ಕಲ್ಪನೆಯಂತೆ ಚಿತ್ರಿಸಿ ತಂದರು ವಿಜಯ್. ಅದನ್ನು ನೋಡಿ ಸಂತೃಪ್ತವಾದ ರಾಜ್ ಬಳಗವು ವಿಜಯ್ ಅವರಿಗೆ ರಾಜ್ ಅವರ ಮುಂದಿನ ಸಾಹಸಪ್ರಧಾನವಾದ ಚಿತ್ರವನ್ನು ನಿರ್ದೇಶಿಸುವ ಅವಕಾಶ ನೀಡಿತು. ಅದು ರಾಜ್‌ಕುಮಾರ್ ಅವರ 150ನೇ ಚಿತ್ರ; ಕನ್ನಡದಲ್ಲಿ ವಿಜಯ್ ಅವರ ನಾಲ್ಕನೇ ಚಿತ್ರ. ಅದೇ 'ಗಂಧದ ಗುಡಿ'. ಆ ಚಿತ್ರದ ಕಾಸ್ಟಿಂಗ್‌ನಲ್ಲಿ ಒಂದು ಪ್ರಯೋಗ ಮಾಡಿದ್ದರು ವಿಜಯ್. ಅದುವರೆಗೆ ಕೇವಲ ಮೂರು ಚಿತ್ರಗಳಲ್ಲಿ ಮಾತ್ರ ನಟಿಸಿದ್ದ, ಹೀರೋ ಆಗಿ 'ನಾಗರಹಾವು' ಚಿತ್ರದಂಥ ಸೂಪರ್ ಹಿಟ್ ಕೊಟ್ಟಿದ್ದ ವಿಷ್ಣುವರ್ಧನ್ ಅವರಿಂದ ವಿಲನ್ ರೋಲ್ ಮಾಡಿಸಿದ್ದರು. 'ಗಂಧದ ಗುಡಿ' ಚಿತ್ರವು ಅದ್ಭುತ ಯಶಸ್ಸು ಕಂಡಿತು; ರಾಜ್ ಅವರ ವೃತ್ತಿಬದುಕಿನ ಶ್ರೇಷ್ಠ ಹತ್ತು ಚಿತ್ರಗಳ ಪೈಕಿ ಒಂದೆಂದು ಪರಿಗಣನೆಗೊಳಗಾಯಿತು. ಚಿತ್ರಕ್ಕಾಗಿ ಚಿ. ಉದಯಶಂಕರ್ ಬರೆದು, ಪಿ.ಬಿ. ಶ್ರೀನಿವಾಸ್ ಹಾಡಿದ 'ನಾವಾಡುವ ನುಡಿಯೇ ಕನ್ನಡ ನುಡಿ' ಹಾಡು ಕನ್ನಡಿಗರ ನೆಚ್ಚಿನ ಹಾಡುಗಳಲ್ಲೊಂದಾಯಿತು. ಆದರೆ, ಚಿತ್ರದ ಕ್ಲೈಮಾಕ್ಸ್ ಚಿತ್ರೀಕರಣದ ವೇಳೆ ಗನ್ ವಿವಾದ ಸ್ಫೋಟಗೊಂಡದ್ದು, ಮುಂದೆ ಅದು ರಾಜ್‌ಕುಮಾರ್ ಹಾಗೂ ವಿಷ್ಣುವರ್ಧನ್ ಅಭಿಮಾನಿಗಳ ನಡುವೆ ಸಂಘರ್ಷಕ್ಕೆ ಕಾರಣವಾಗಿದ್ದು, ಇದೆಲ್ಲದರಿಂದಾಗಿ ರಾಜ್ ಮತ್ತು ವಿಷ್ಣು ಮುಂದೆಂದೂ ಜೊತೆಯಲ್ಲಿ ನಟಿಸದೇ ಹೋಗಿದ್ದು ಕನ್ನಡ ಚಿತ್ರರಂಗದ ಇತಿಹಾಸದಲ್ಲಿಯೇ ಅತ್ಯಂತ ವಿಷಾದನೀಯ ಘಟನೆಗಳಾಗಿ ದಾಖಲಾದವು.

'ಗಂಧದ ಗುಡಿ'ಯ ಯಶಸ್ಸಿನಿಂದ ಉತ್ತೇಜಿತರಾದ ರಾಜ್‌ಕುಮಾರ್, ವಿಜಯ್ ನಿರ್ದೇಶನದ ಪೌರಾಣಿಕ ಚಿತ್ರ 'ಶ್ರೀ ಶ್ರೀನಿವಾಸ ಕಲ್ಯಾಣ'ದಲ್ಲಿ ನಟಿಸಿದರು. ವಿಜಯ್ ಅವರು ಪೌರಾಣಿಕ ಚಿತ್ರವನ್ನು ಹೇಗೆ ನಿಭಾಯಿಸುತ್ತಾರೋ ಎನ್ನುವ ಅನುಮಾನ ರಾಜ್ ಬಳಗದಲ್ಲಿತ್ತು. ಚಿತ್ರ ಪೂರ್ಣಗೊಳ್ಳುವ ಹೊತ್ತಿಗೆ ಎಲ್ಲರೂ ವಿಜಯ್ ಅವರನ್ನು ಹೊಗಳುವವರೇ. ಅಲ್ಲಿಗೆ ವಿಜಯ್ ಅವರ ಬಗೆಗೆ ರಾಜ್ ಕುಟುಂಬಕ್ಕಿದ್ದ ಅನುಮಾನಗಳೆಲ್ಲ ಬಗೆಹರಿದು, ಸಂಪೂರ್ಣ ನಂಬಿಕೆ ಬಂದಿತ್ತು. ಎಷ್ಟರ ಮಟ್ಟಿಗೆ ಎಂದರೆ, 'ಗಂಧದ ಗುಡಿ'ಯ ನಂತರ ರಾಜ್ ಅವರ ಸತತ ಏಳು ಚಿತ್ರಗಳನ್ನು ವಿಜಯ್ ಅವರೇ ನಿರ್ದೇಶಿಸಿದ್ದರು.

'ಗಂಧದ ಗುಡಿ', 'ಶ್ರೀ ಶ್ರೀನಿವಾಸ ಕಲ್ಯಾಣ' ಚಿತ್ರಗಳ ನಂತರ ವಿಜಯ್ ಮತ್ತೊಂದು ಪ್ರಯೋಗಕ್ಕೆ ಕೈ ಹಾಕಿದರು. ಅದು ಕಾದಂಬರಿ ಆಧಾರಿತ ಚಿತ್ರ ಮಾಡಿದ್ದು. ರದ್ದಿ ಪುಸ್ತಕಗಳ ಅಂಗಡಿಯಲ್ಲಿ ಸಿಕ್ಕ ದೇವುಡು ಅವರ ಕಾದಂಬರಿಯನ್ನು ಪಾರ್ವತಮ್ಮ ರಾಜ್‌ಕುಮಾರ್ ವಿಜಯ್ ಅವರಿಗೆ ಕೊಟ್ಟು, 'ಇದು ಉತ್ತಮ ಚಿತ್ರವಾಗಬಹುದು ನೋಡಿ' ಎಂದಿದ್ದರು. ಪಾರ್ವತಮ್ಮನವರ ನಂಬಿಕೆ ಹುಸಿಯಾಗಲಿಲ್ಲ. ರಾಜ್ ಅವರಿಗಾಗಿ ವಿಜಯ್ ನಿರ್ದೇಶಿಸಿದ ಆ ಚಿತ್ರ ಕನ್ನಡದ ಸಾರ್ವಕಾಲಿಕ ಶ್ರೇಷ್ಠ ಚಿತ್ರಗಳಲ್ಲಿ ಒಂದೆಂದು ಹೆಸರು ಪಡೆಯಿತು. ಆ ಚಿತ್ರವೇ 'ಮಯೂರ'. ಆ ಚಿತ್ರದ 'ನಾನಿರುವುದೇ ನಿಮಗಾಗಿ' ಹಾಡು ರಾಜ್ ಹಾಗೂ ಕನ್ನಡಿಗರ ನಡುವಿನ ಸಂಬಂಧಕ್ಕೆ ಬರೆದ ಭಾಷ್ಯದಂತಿದೆ.

## ಬಾಹುಬಲಿಯಲ್ಲಿ ಕನ್ನಡದ ಕಥೆ!

ತೀವ್ರ ಅನಾರೋಗ್ಯಪೀಡಿತರಾಗಿ ಹಾಸಿಗೆ ಹಿಡಿಯುವ ಮುನ್ನ ವಿಜಯ್ ಅವರು ಥಿಯೇಟರ್‌ಗೆ ಹೋಗಿ ನೋಡಿದ ಕೊನೆಯ ಚಿತ್ರ 'ಬಾಹುಬಲಿ'. ಹೇಗಿತ್ತು ಆ ಸಿನಿಮಾ ಎಂದು ವಿಜಯ್ ಅವರನ್ನು ಕೇಳಿದರೆ ನಗುತ್ತಲೇ 'ಅದು ನನ್ನದೇ ಚಿತ್ರದ ಕಥೆ. ಕ್ಯಾರಕ್ಟರೈಸೇಷನ್ ಅನ್ನು ಅಗ್ರೆಸ್ಸೀವ್ ಆಗಿ ಮಾಡಿದ್ದಾರೆ, ಅಷ್ಟೇ ವ್ಯತ್ಯಾಸ!' ಎನ್ನುತ್ತಾರೆ. ಅದು ಸತ್ಯವೂ ಹೌದು. 'ಬಾಹುಬಲಿ' ಚಿತ್ರದ ಕಥೆಗಾರ ಹಾಗೂ ನಿರ್ದೇಶಕ ರಾಜಮೌಳಿಯ ತಂದೆ ವಿಜಯೇಂದ್ರಪ್ರಸಾದ್ ಅವರೇ ಈ ಸಂಗತಿಯನ್ನು ಒಪ್ಪಿಕೊಂಡಿದ್ದಾರೆ; ರಾಜಕುಮಾರನೊಬ್ಬ ತನ್ನ ರಾಜಮನೆತನದ ಹಿನ್ನೆಲೆ ಗೊತ್ತಿಲ್ಲದೇ ಸಾಮಾನ್ಯನಂತೆ ಇರುವ 'ಮಯೂರ' ಚಿತ್ರದ ಎಳೆಯೇ 'ಬಾಹುಬಲಿ'ಯ ಕಥಾಹಂದರವನ್ನು ರೂಪಿಸಲು ತನಗೆ ಸ್ಫೂರ್ತಿಯಾಗಿದ್ದು ಎಂದಿದ್ದಾರೆ ವಿಜಯೇಂದ್ರಪ್ರಸಾದ್.

'ಮಯೂರ' ಚಿತ್ರದ ನಂತರ 'ನಾ ನಿನ್ನ ಮರೆಯಲಾರೆ', 'ಬಡವರ ಬಂಧು' ಚಿತ್ರಗಳನ್ನು ನಿರ್ದೇಶಿಸಿದರು ವಿಜಯ್. ಅವುಗಳ ನಂತರ ಬಂದಿದ್ದೇ 'ಸನಾದಿ ಅಪ್ಪಣ್ಣ'. ಮೊದಲಿಗೆ ಈ ಚಿತ್ರವನ್ನು ನಿರ್ದೇಶಿಸುವ ಬಗ್ಗೆ ವಿಜಯ್ ಅವರಿಗೇ ವಿಶ್ವಾಸ ಇರಲಿಲ್ಲವಂತೆ. ತನಗೆ ಸಂಗೀತದ ಗಂಧ ಗಾಳಿಯೇ ಇಲ್ಲ, ತಾನು ಈ ಚಿತ್ರ ನಿರ್ದೇಶಿಸಲಾರೆ ಎಂದು ಅವರು ಹೇಳಿಯೂ ಬಿಟ್ಟಿದ್ದರಂತೆ. ಆದರೆ, ರಾಜ್‌ಕುಮಾರ್ ಬಿಡಲಿಲ್ಲ. 'ನೀವು ಮಾಡಬಲ್ಲಿರಿ, ಮಾಡಿ' ಎಂದು ಹುರಿದುಂಬಿಸಿದರಂತೆ. 'ಸನಾದಿ ಅಪ್ಪಣ್ಣ' ಚಿತ್ರಕ್ಕಾಗಿ ಶಹನಾಯಿ ನುಡಿಸಲು ಬಿಸ್ಮಿಲ್ಲಾ ಖಾನ್ ಬಂದದ್ದು, ಚಿತ್ರದಲ್ಲಿ ಅಪ್ಪಣ್ಣನ ಪಾತ್ರದಲ್ಲಿ ರಾಜ್ ಸಾಧಿಸಿದ ತಾದಾತ್ಮ್ಯ, ರಾಜ್ ಶಹನಾಯಿ ಹಿಡಿಯುವ ಪರಿಗೆ ಬಿಸ್ಮಿಲ್ಲಾ ಖಾನ್ ಅವರೇ ಬೆರಗಾಗಿ ಅಣ್ಣಾವ್ರನ್ನು ಹೊಗಳಿದ್ದು; ಶಹನಾಯಿಯ ಆ ನಾದವು ಚಿತ್ರಪ್ರೇಮಿಗಳ ಎದೆಯಿಂದ ಎದೆಗೆ ಅಮೃತವಾಹಿನಿಯಂತೆ ಹರಿದದ್ದು – ಎಲ್ಲವೂ ಈಗ ಇತಿಹಾಸ. ರಾಜ್–ವಿಜಯ್ ಅವರ ಕಾಂಬಿನೇಷನ್‌ನ ವಿಜಯಯಾತ್ರೆ 'ಹುಲಿಯ ಹಾಲಿನ ಮೇವು', 'ಭಕ್ತಪ್ರಹ್ಲಾದ' ಚಿತ್ರಗಳ ಮೂಲಕವೂ ಮುಂದುವರೆಯಿತು. ಇವರ ಕಾಂಬಿನೇಷನ್‌ನಲ್ಲಿ ಬಂದ ಚಿತ್ರಗಳ ಪೈಕಿ ಅಷ್ಟು ಯಶಸ್ಸು ಕಾಣದ ಚಿತ್ರವೆಂದರೆ ಅದು 'ನೀ ನನ್ನ ಗೆಲ್ಲಲಾರೆ' ಮಾತ್ರ.

ಹಾಗೆಂದು ವಿಜಯ್ ಕೇವಲ ರಾಜ್‌ಕುಮಾರ್ ಚಿತ್ರಗಳಿಗಷ್ಟೇ ಸೀಮಿತವಾಗಲಿಲ್ಲ; ಆ ಜಮಾನಾದ ಕನ್ನಡದ ಮುಖ್ಯ ನಾಯಕ ನಟರಾಗಿದ್ದ ಶಂಕರ್‌ನಾಗ್, ಅನಂತನಾಗ್, ವಿಷ್ಣುವರ್ಧನ್ ಮುಂತಾದವರ ಚಿತ್ರಗಳನ್ನೂ ನಿರ್ದೇಶಿಸಿದ್ದಾರೆ; ಇವರೆಲ್ಲರಿಗೆ ಕನಿಷ್ಠ ಒಂದೊಂದಾದರೂ ವೃತ್ತಿಜೀವನದ ಮೈಲಿಗಲ್ಲುಗಳಂಥ ಚಿತ್ರ ಕೊಟ್ಟಿದ್ದಾರೆ.

ವಿಜಯ್ ಮೊದಲಿನಿಂದಲೂ ತಮ್ಮ ಚಿತ್ರಗಳ ಪ್ರಮುಖ ಪಾತ್ರಗಳಿಗೆ ನಟ–ನಟಿಯರನ್ನು ಆಯ್ಕೆ ಮಾಡುವ ವಿಚಾರದಲ್ಲಿ ಅದ್ಭುತ ಎನ್ನಿಸುವ ಪ್ರಯೋಗಗಳನ್ನು ಮಾಡಿದ್ದಾರೆ. ಹಾರರ್ ಕಥೆಯಿದ್ದ 'ನಾ ನಿನ್ನ ಬಿಡಲಾರೆ' ಚಿತ್ರದಲ್ಲಿ ಅನಂತನಾಗ್ ಅವರನ್ನು ಹಾಕಿಕೊಂಡು ಅವರ ಜೋಡಿಯಾಗಿ